**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. : 01/2025**

**ಚಾ.ಸಾಃ 3, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಮೊಹಮ್ಮದ್ ತಾಹಿರ್ ಮಸ್ತಾನಾ |
| ತಂದೆಯ ಹೆಸರು | ಅಲಿಅಕ್ಬರ್ ಮಸ್ತಾನಾ |
| ವಯಸ್ಸು | 46 ವರ್ಷಗಳು |
| ಉದ್ಯೋಗ | ಅಡಿಗೆ ಕೆಲಸ |
| ವಾಸ್ತವ್ಯ | ಮಗದೂಮ್ ಕಾಲೋನಿ, ಭಟ್ಕಳ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 29-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 29-06-2024 ರಂದು ಗೇರುಸೊಪ್ಪಾದ ಡ್ಯಾಮ್ ಹತ್ತಿರ ಒಂದು ಮಿನಿ ಬಸ್ ಮತ್ತು ಓಮಿನಿಕಾರಿನ ನಡುವೆ ಅಪಘಾತ ಆಗಿದ್ದು ಸದರಿ ಸ್ಥಳದಲ್ಲಿ ಚಾಸಾ-7 ರವರು ತೋರಿಸಿದ ಸ್ಥಳದಲ್ಲಿ ಸಂಜೆ 04-00 ಗಂಟೆ ಸಮಯಕ್ಕೆ ಪೋಲಿಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ಕಚ್ಚಾ ನಕಾಶೆ ತಯಾರಿಸಿ, ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. ಆ ಕಾಲಕ್ಕೆ ಅಪಘಾತಪಡಿಸಿದ ಮಿನಿ ಬಸ್ಸು ಮತ್ತು ಟೆಂಪೋ ಇದ್ದು ಪೋಲೀಸರು ಅವುಗಳ ಫೋಟೋವನ್ನೂ ಸಹ ತೆಗೆಸಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-4 ರಿಂದ 9 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎಲ್. ನಾಯ್ಕರಿಂದಃ**

ನಮ್ಮೂರಿನಿಂದ ಅಪಘಾತವಾದ ಸ್ಥಳ ಸುಮಾರು 50 ಕಿಲೋಮೀಟರ್ ದೂರ ಎಂದರೆ ಸರಿ. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ. ಚಾಸಾ-7 ನನಗೆ 15 ವರ್ಷಗಳಿಂದ ಪರಿಚಯ. ಅವರು ನನಗೆ ಅಡಿಗೆ ಕಾಂಟ್ರಾಕ್ಟ ಕೆಲಸ ಕೊಡಿಸುತ್ತಾರೆ ಎಂದರೆ ಸರಿ. ನಾನು ಅಪಘಾತ ಸ್ಥಳಕ್ಕೆ ಬರುವ ಮೊದಲು ಸದರಿ ಸ್ಥಳದಲ್ಲಿ ಸುಮಾರು 15 ಜನ ಸೇರಿದ್ದರು. ಪೋಲೀಸರು ನಮ್ಮ ಸಮಕ್ಷಮದಲ್ಲಿ ಪಂಚನಾಮೆ ಮಾಡಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪಂಚನಾಮೆ ಬರೆಯಲು ಅರ್ಧ ಮಾಹಿತಿ ನಾವೇ ನೀಡಿದ್ದೇವೆ. ನಾನು ನೀಡಿರುವ ಮಾಹಿತಿಗಳು ಈಗ ಮರೆತು ಹೋಗಿದೆ. ಪಂಚನಾಮೆಯ ಕಾಲಕ್ಕೆ ಅಪಘಾತಪಡಿಸಿದ ವಾಹನಗಳನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಲಾಗಿತ್ತು ಮತ್ತು ರಸ್ತೆಯ ಮೇಲೆ ವಾಹನಗಳು ಸರಾಗವಾಗಿ ಓಡಾಡುತ್ತಿದ್ದವು. ಅಪಘಾತ ಸ್ಥಳದಲ್ಲಿ ಎರಡೂ ವಾಹನಗಳ ಗ್ಲಾಸ್ ಚೂರುಗಳು ಬಿದ್ದಿದ್ದವು. ಹೊನ್ನಾವರದಿಂದ ಗೇರುಸೊಪ್ಪಾಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಗ್ಲಾಸ್ ಚೂರುಗಳು ಬಿದ್ದಿತ್ತು. ಸ್ಥಳದ ರಸ್ತೆಯ ಮೇಲೆ ರಕ್ತ ಬಿದ್ದಿರಲಿಲ್ಲ.

ಪೋಲೀಸರು ನನ್ನ ಸಮಕ್ಷಮ ಅಪಘಾತ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ಸಂಬಂಧಿಕನಾಗಿರುವುದರಿಂದ ಆತನ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**